**<u>ದಿನಾಂಕಃ02.08.2024 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.</u>**

**<u>ಪಾಟಿಸವಾಲುಃ ಪ್ರತಿವಾದಿ ಪರ ಶ್ರೀ. ಟಿ.ವಿ.ಎಸ್., ವಕೀಲರಿಂದಃ</u>**

ಪ್ರತಿವಾದಿ ನನ್ನ ಚಿಕ್ಕಪ್ಪ ಇರುತ್ತಾರೆ. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸವಿದ್ದು, ಟೈಲರಿಂಗ್ ಕೆಲಸ ಮಾಡುತ್ತಿದ್ದೇನೆ. ನಾನು 5 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿರುತ್ತೇನೆ. ನಮಗೆ 20 ಮೇಕೆಗಳು ಇರುತ್ತದೆ. ನನ್ನ ತಂದೆಗೆ ಮೂರು ಜನ ಮಕ್ಕಳು ಇದ್ದು, ನನ್ನ ಅಕ್ಕ ಮದುವೆಯಾಗಿರುತ್ತಾರೆ, ನನ್ನ ತಮ್ಮ ಆಂಧ್ರದ ಕೊತ್ತಕೋಟೆಯಲ್ಲಿ ಮಸೀದಿಯಲ್ಲಿ ಕೆಲಸಮಾಡುತ್ತಿದ್ದಾರೆ. ನಾನು ಚಿಕ್ಕವನಿದ್ದಾಗಿನಿಂದಲೂ ನನ್ನ ತಂದೆ ಮೇಕೆಗಳನ್ನು ಸಾಕುತ್ತಾರೆ. ಸದರಿ ಮೇಕೆಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಾರೆ ಎಂದರೆ ಸರಿ. ಅವರೇ ಮೇಕೆಗಳನ್ನು ಕಾಡಿಗೆ ಮೇಯಿಸಿಕೊಂಡು ಹೋಗಿ ಬಂದು ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು , ಹಿಂದೆ ನನ್ನ ತಂದೆ ಹೋಗುತ್ತಿದ್ದು, ಈಗ ನನ್ನ ತಾಯಿ ಮೇಕೆಗಳನ್ನು ಮೇಯಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ನನ್ನ ತಾಯಿ 3 ವರ್ಷಗಳಿಂದ ಮೇಕೆಗಳನ್ನು ಮೇಯಿಸುತ್ತಿದ್ದಾರೆ. ನನ್ನ ತಾಯಿಗೂ ಕೂಡ ವಯಸ್ಸಾಗಿದೆ. ಈಗಲೂ ಕೂಡ ನನ್ನ ತಂದೆಯೇ ಮೇಕೆಗಳನ್ನು ಮೇಯಿಸುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಕಾಲಿಗೆ ಏಟಾಗಿದ್ದು, ಗ್ಯಾಂಗ್ರಿನ್ ಆಗಿರುತ್ತದೆ. ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯ ಕಾಲಿಗೆ ಗ್ಯಾಂಗ್ರಿನ್ ಆದ ಕಾರಣ, ಅವರಿಗೆ ಓಡಾಡಲು ಆಗುವುದಿಲ್ಲ ಎಂದು ಅಧಿಕಾರ ಪತ್ರದಲ್ಲಿ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು, ಗ್ಯಾಂಗ್ರಿನ್ ಆದ ಬಗ್ಗೆ ಹೇಳಿರುವುದಿಲ್ಲ, ಓಡಾಡಲು ಆಗದ ಬಗ್ಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲೂ ಕೂಡ ಸದರಿ ವಿಚಾರಗಳನ್ನು ಹೇಳಿರುವುದಿಲ್ಲ. ನನ್ನ ತಂದೆ ಆರೋಗ್ಯವಾಗಿದ್ದರೂ ಸಹಾ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ನನಗೆ ಸುಳ್ಳು ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ದಾರಿ ಬೇಕೆಂದು ಈ ದಾವೆ ಹೂಡಿರುತ್ತಾರೆ. ನಾನು ದಾರಿಯ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ನಾನು ಹೇಳುವ ದಾರಿ

ಅಸ್ಥಿತ್ವದಲ್ಲಿ ಇದೆ ಎಂದು ತೋರಿಸಲು ಯಾವುದೇ ಪಂಚಾಯಿತಿಯ ನಕ್ಷೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಯಾವುದೇ ಗ್ರಾಮ ಪಂಚಾಯಿತಿ ಕಡತಗಳಲ್ಲಿ ಸದರಿ ರಸ್ತೆ ಅಸ್ಥಿತ್ವದಲ್ಲಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ. ಸಾಕ್ಷಿ ಮುಂದುವರೆದು, ವಿಭಾಗ ಪತ್ರದಲ್ಲಿ ರಸ್ತೆಯ ಬಗ್ಗೆ ಉಲ್ದೇಖ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರ ನುಡುವೆ ಯಾವುದೇ ವಿಭಾಗ ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ.1 ರಿಂದ 4 ರ ದಾಖಲೆಗಳಲ್ಲಿ ರಸ್ತೆ ಕಂಡುಬರುವುದಿಲ್ಲ ಮತ್ತು ರಸ್ತೆಯ ಅಸ್ಥಿತ್ವ ತಿಳಿದು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾನು ವಿಭಾಗ ಪತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವ ವಿಭಾಗ ಪತ್ರ ಹೊರತು ಪಡಿಸಿ ಸದರಿ ನಾನು ಹೇಳುವ ದಾವಾ ರಸ್ತೆ ಅಸ್ಥಿತ್ವದಲ್ಲಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳುವ ವಿಭಾಗ ಪತ್ರವನ್ನು ನನ್ನ ತಂದೆ ಸೃಷ್ಟಿಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುವ ವಿಭಾಗ ಪತ್ರವನ್ನು ಯಾರು ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರವನ್ನು ದಿನಾಂಕಃ 25.07.2005 ರಲ್ಲಿ ಮಾಡಲಾಗಿದೆ. ಸದರಿ ದಾಖಲೆಗೆ ಹೈದರಾಬಿ ಮತ್ತು ನಜೀರ್ ಸಾಬಿ ಸಾಕ್ಷಿ ಸಹಿ ಮಾಡಿರುತ್ತಾರೆ. ನಾನು ಹೇಳುವಂತೆ ಸದರಿ ವಿಭಾಗ ಪತ್ರಕ್ಕೆ ಹೈದರಾಬಿ ಮತ್ತು ನಜೀರ್ ಸಾಬಿ ಸಾಕ್ಷಿದಾರರಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ವಿಭಾಗ ಪತ್ರದಲ್ಲಿ ಯಾರಿಗೆಲ್ಲಾ ಎಷ್ಟು ವಿಸ್ತೀರ್ಣದ ಆಸ್ತಿ ಹೋಗಿರುತ್ತದೆ ಎಂದು ನನಗೆ ಹೇಳಬಹುದು. ಸಾಕ್ಷಿ ಮುಂದುವರೆದು, ನನ್ನ ತಂದೆಗೆ ಪೂ.ಪ. 22 ಅಡಿ ಮತ್ತು ಉ.ದ.36 ಅಡಿಗಳ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯಾದ ಸಿದ್ದೀಕ್ ಸಾಬಿ, ಪ್ರತಿವಾದಿಯಾದ ಹಸೇನ್ ಸಾಬಿ ಮತ್ತು ಖಾಸಿಂ ಸಾಬಿ ಮತ್ತು ಮಸ್ತಾನ್ ವಲ್ಲಿ ಸಹೋದರರು ಇರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಅಂದರೆ ಡಿ.ಆರ್.ನಂ.46 ರಲ್ಲಿ ಎಲ್ಲಾರು ಸಮಾನವಾಗಿ ಪ್ರತ್ಯೇಕ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯ ಪೂರ್ವದ ಭಾಗ ವಾದಿ ಮತ್ತು ಖಾಸಿಂ ಸಾಬಿ ಅವರಿಗೆ ಹೋಗಿರುತ್ತದೆ ಎಂದರೆ ಸರಿ. ಅದೇ ರೀತಿ ಪಶ್ಚಿಮದ ಭಾಗ ನನ್ನ ತಂದೆ ಸಿದ್ದೀಕ್ ಸಾಬಿ ಮತ್ತು ಮಸ್ತಾನ್ ವಲ್ಲಿಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು

ಪ್ರತಿವಾದಿಗೆ ಬಂದ ಆಸ್ತಿ ದಕ್ಷಿಣದ ಮೂಲೆಯಲ್ಲಿ ಕೊನೆಯಲ್ಲಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಉತ್ತರದ ಭಾಗದ ಪೂರ್ವ ಪಶ್ಚಿಮದಲ್ಲಿ ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರ ಆಸ್ತಿ ಬರುತ್ತದೆ ಎಂದರೆ ಸರಿ. ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರ ಆಸ್ತಿಯ ಉತ್ತರಕ್ಕೆ ಸರ್ಕಾರಿ ಮುಖ್ಯ ರಸ್ತೆ ಇದೆ ಎಂದರೆ ಸರಿ. ಅವರಲ್ಲಿ ಮಸ್ತಾನ್ ವಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದು, ಖಾಸಿಂ ಸಾಬಿ ಅವರು ಮನೆ ಕಟ್ಟಲು ಈಗ ಅಡಿಪಾಯ ಹಾಕಿರುತ್ತಾರೆ. ಸದರಿ ನಮ್ಮ ಮತ್ತು ಪ್ರತಿವಾದಿಯದ್ದು ದಕ್ಷಿಣದ ಕೊನೆಯಲ್ಲಿ ನಿವೇಶನ ಇರುವ ಕಾರಣ, ಸದರಿ ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರು ತಮ್ಮ ಹಿಸ್ಸೆಯ ಆಸ್ತಿಯಲ್ಲಿ ನಮಗೆ ಮತ್ತು ಪ್ರತಿವಾದಿಗೆ ಎಂದು ಉತ್ತರದ ಮುಖ್ಯ ರಸ್ತೆಗೆ ಬರಲು 5 ಅಡಿ ರಸ್ತೆ ಬಿಟ್ಟಿದ್ದು, ಅದರಲ್ಲಿ ದ್ವಿ ಚಕ್ರ ವಾಹನ ಸಂಚರಿಸುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ರಸ್ತೆ 10 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಸದರಿ ರಸ್ತೆ 10 ಅಡಿ ಇರುತ್ತದೆ ಎಂದು ಹೇಳಲು ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ. 5 ಅಡಿ ರಸ್ತೆಯನ್ನು ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ತಮ್ಮ ಜಾಗದಲ್ಲಿ ನಮಗಾಗಿ ಅಂದರೆ ವಾದಿ ಮತ್ತು ಪ್ರತಿವಾದಿಯ ಬಳಕೆಗಾಗಿ ಅವರ ಜಾಗದಲ್ಲಿ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಬಂದ 22 X 36 ಅಡಿಯಲ್ಲಿ ನಾವು ಸಂಪೂರ್ಣವಾಗಿ ಮನೆ ಕಟ್ಟಿಕೊಂಡಿದ್ದೇವೆ. ಮನೆಯ ಮುಂದೆ ಸುಮಾರು 4.5 ಅಡಿಗಳಷ್ಟು ಕಾಂಕ್ರಿಟ್ ಹಾಕಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಕಾಂಕ್ರಿಟ್‌ನ ನಂತರ ಪ್ರತಿವಾದಿಯ ನಿವೇಶನ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿ ಹಾಜರುಪಡಿಸಿರುವ ಅಂದರೆ ಸಿ.ಡಿ. ಇಲ್ಲದ ಕಾರಣ, ಗುರುತಿಸದೇ ಪ್ರಕರಣದ ಕಡತದಲ್ಲಿ ಇದ್ದ ಪೋಟೋಗಳನ್ನು ಪಾಟೀಸವಾಲಿನ ಸಂದರ್ಭದಲ್ಲಿ ತೋರಿಸಿದ್ದು, ಸದರಿ ಪೋಟೋದಲ್ಲಿ ಕಂಡುಬರುವ ಬಳಿ ಬಣ್ಣದ ಮನೆ ಮತ್ತು ಮನೆಯ ಮುಂದೆ ಹಾಕಿರುವ ಕಟ್ಟೆ ಮತ್ತು ಅದರ ಪಕ್ಕದಲ್ಲಿರುವ ಪ್ರತಿವಾದಿಯ ಮನೆಯನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ನಿಡಿ.1 ಮತ್ತು ನಿಡಿ. 2 ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿ ನಾನು ಹೇಳುವಂತೆ 10 ಅಡಿ ರಸ್ತೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಮನೆಯಿಂದ ಪಾಯದ ನಡುವೆ 10 ಅಡಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಹಾಗೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ

10 ಅಡಿ ರಸ್ತೆ ಅಸ್ಥಿತ್ವದಲ್ಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಮನೆ ಕಟ್ಟಿ ಕಾಂಕ್ರಿಟ್ ಹಾಕಿ 5 ವರ್ಷಗಳಾಗಿರುತ್ತದೆ. ನಾವು ದಾವೆ ಹೂಡುವ ಮೊದಲೇ ಮನೆ ಕಟ್ಟಿದ್ದೇವು. ದಾವೆ ಹೂಡಿದ ನಂತರ ಮನೆಯ ಮುಂದೆ ಕಾಣುವ ಕಾಂಕ್ರಿಟ್ ಕಟ್ಟೆಯನ್ನು ಕಟ್ಟಿರುತ್ತೇವೆ. ನನ್ನ ವಾದ ಪತ್ರದಲ್ಲಿ ಅಥವಾ ತಿದ್ದುಪಡಿ ವಾದ ಪತ್ರದಲ್ಲಿ ನಮ್ಮ ಮನೆಯ ಮುಂದೆ ಕಾಂಕ್ರಿಟ್ ಕಟ್ಟೆಯನ್ನು ಕಟ್ಟಿರುವ ಬಗ್ಗೆ ಹೇಳಿರುವುದಿಲ್ಲ. ನಾನು 10 ಅಡಿಗಳನ್ನು ಪ್ರತಿವಾದಿ ಅತಿಕ್ರಮಿಸಿ ಬಚ್ಚಲು ಮನೆ ಕಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ 5 ಅಡಿ ಜಾಗದಲ್ಲಿ ನಾವು ಕಾಂಕ್ರಿಟ್ ಹಾಕಿಕೊಂಡಂತೆ, ಪ್ರತಿವಾದಿ ತನ್ನ 5 ಅಡಿ ಜಾಗದಲ್ಲಿ ಬಚ್ಚಲು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ದಾರಿಗೆ ಬಿಟ್ಟ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ನಾನು ಹೇಳುವ ಜಾಗವನ್ನು ಪ್ರತಿವಾದಿ ದಾರಿಗೆ ಬಿಟ್ಟಿರುತ್ತಾರೆ ಎಂದು ಹೇಳಲು ಯಾವುದೆ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ 5 ಅಡಿ ಕಾಂಕ್ರಿಟ್ ಹಾಕಿರುವ ಜಾಗದಲ್ಲಿ ಮತ್ತು ಪ್ರತಿವಾದಿಯ 5 ಅಡಿಯಲ್ಲಿ ಬಚ್ಚಲು ಮನೆ ಇರುವ ಜಾಗದಲ್ಲಿ, ಅಲ್ಲಿ ದಾರಿಗೆ ಬಿಡಬೇಕು ಎಂದು ಯಾವುದೇ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಹಾಕಿಕೊಂಡ 5 ಅಡಿ ಕಾಂಕ್ರಿಟ್ ನ ಬಗ್ಗೆ ಈ ದಾವೆಯಲ್ಲಿ ಯಾವುದೇ ಪರಿಹಾರ ಕೋರಿರುವುದಿಲ್ಲ. ನಾವು ಹಾಕಿಕೊಂಡು 5 ಅಡಿ ಕಾಂಕ್ರಿಟ್ ಮತ್ತು ಪ್ರತಿವಾದಿ 5 ಅಡಿಯಲ್ಲಿ ಕಟ್ಟಿರುವ ಬಚ್ಚಲು ಮನೆ ಸೇರಿ ನಾನು ಹೇಳುವ 10 ಅಡಿ ಜಾಗ ಇದ್ದು, ಆದರೆ ನಮ್ಮ 5 ಅಡಿ ಕಾಂಕ್ರಿಟ್ ನ ಬಗ್ಗೆ ಯಾವುದೇ ಮಾಹಿತಿ ಕೊಡದೆ 10 ಅಡಿಯಲ್ಲೂ ಕೂಡ ಪ್ರತಿವಾದಿಯೇ ಬಚ್ಚಲು ಮನೆ ಕಟ್ಟಿರುತ್ತಾರೆ ಎಂದು ಹೇಳಿ ಸದರಿ ಬಚ್ಚಲು ಮನೆಯನ್ನು ಒಡೆಯಬೇಕೆಂದು ನಾವು ಈ ದಾವೆ ಹೂಡಿರುತ್ತೇವೆ ಎಂದರೆ ಸರಿ. ಪ್ರತಿವಾದಿ ತನ್ನ ಮನೆಯ ಉತ್ತರಕ್ಕೆ ಬಾಗಿಲು ಇಟ್ಟುಕೊಂಡಿದ್ದು, ಪಶ್ಚಿಮಕ್ಕೆ ಯಾವುದೇ ಬಾಗಿಲು ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಂದೆ ಮನೆಯ ಕಾಂಕ್ರಿಟ್ ಹಾಕಿರುವ 5 ಅಡಿ ಜಾಗದ ಮೂಲಕ ನಮ್ಮ ಚಿಕ್ಕಪ್ಪನವರ ಅಂದರೆ ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರ ಮನೆಗಳ ನಡುವೆ ಮುಖ್ಯ ರಸ್ತೆಗೆ ಹೋಗುತ್ತೇವೆ ಎಂದರೆ ಸರಿ. ಹಸೇನ್ ಸಾಬಿ ತಮ್ಮ ಹಿಸ್ಸೆಗೆ ಬಂದ ಜಾಗದ ಪೂರ್ವದಲ್ಲಿ ಮನೆ ಕಟ್ಟಿಕೊಂಡು ಉತ್ತರದ ಕಡೆ ಸ್ವಲ್ಪ ಜಾಗ ಬಿಟ್ಟುಕೊಂಡಿದ್ದಾರೆ ಎಂದರೆ ಸರಿ. ಖಾಸಿಂ ಸಾಬಿ ಅವರ ಮನೆಯ ಬಳಿ ಬಂದು ಅಲ್ಲಿಂದ ಉತ್ತರದಲ್ಲಿರುವ ರಸ್ತೆಗೆ ಪ್ರತಿವಾದಿ

ಹೋಗುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಪ್ರತಿವಾದಿ ಮೇಕೆಗಳನ್ನು ಕಟ್ಟಿಕೊಂಡಿದ್ದು, ಹಾಗಾಗಿ ಅವರು ಖಾಸಿಂ ಸಾಬಿ ಅವರ ಮನೆಯ ಬಳಿ ಬಂದು ಅವರ ಅನುಕೂಲಕ್ಕೆ ಅಲ್ಲಿಂದ ಉತ್ತರದ ರಸ್ತೆಗೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮತ್ತು ಪ್ರತಿವಾದಿಯ ನಿವೇಶನಗಳು ದಕ್ಷಿಣದ ಕೊನೆಯ ಭಾಗದಲ್ಲಿರುವ ಕಾರಣ, ಅಲ್ಲಿಗೆ 5 ಅಡಿ ಜಾಗ ಹೊರತುಪಡಿಸಿ ಬೇರೆ ರಸ್ತೆಯ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರಿಗೆ ಸದರಿ 5 ಅಡಿ ಜಾಗದಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬಿ ಅವರಿಗೆ ಅವರ ಆಸ್ತಿಯ ದಕ್ಷಿಣಕ್ಕೆ ಮತ್ತು ನನ್ನ ತಂದೆಗೆ ಮತ್ತು ಪ್ರತಿವಾದಿಗೆ ನಮ್ಮ ಆಸ್ತಿಯ ಉತ್ತರಕ್ಕೆ ಇರುವ 5 ಅಡಿ ಖಾಲಿ ಜಾಗದಲ್ಲಿ ಮಾತ್ರ ನಾವು ಓಡಾಡಲು ಬಳಸುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಸದರಿ ಜಾಗ 10 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಬಿಟ್ಟುಕೊಂಡಿರುವ 5 ಅಡಿ ಕಾಂಕ್ರಿಟ್ ಜಾಗಕ್ಕೆ ಪ್ರತಿವಾದಿ ಯೂವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು , ನಾವು ಕಾಂಕ್ರಿಟ್ ಹಾಕುವಾಗ ಪ್ರತಿವಾದಿ ನಮ್ಮೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಗಲಾಟೆ ಮಾಡಿದ ಕಾರಣ, ನನ್ನ ತಂದೆ ಈ ದಾವೆ ಹೂಡಿರುವುದಿಲ್ಲ, ಪ್ರತಿವಾದಿ ಬಚ್ಚಲು ಮನೆ ಕಟ್ಟಿದ ಕಾರಣ, ನನ್ನ ತಂದೆ ಈ ದಾವೆ ಹೂಡಿರುತ್ತಾರೆ.

ನಮಗೂ ಮತ್ತು ಪ್ರತಿವಾದಿಗೂ ಸುಮಾರು ವರ್ಷಗಳಿಂದ ಮಾತುಕತೆ ಇರುವುದಿಲ್ಲ ಎಂದರೆ ಸರಿ. ನಾವು ಕಾಂಕ್ರಿಟ್ ಹಾಕಿರುವ ಜಾಗಕ್ಕೆ ಪ್ರತಿವಾದಿ ಯಾವತ್ತೂ ಬಂದು ಓಡಾಡಿರುವುದಿಲ್ಲ ಎಂದರೆ ಸರಿ. ಸದರಿ 5 ಅಡಿ ಕಾಂಕ್ರಿಟ್ ಜಾಗಕ್ಕೆ ನಿಮಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯ 5 ಅಡಿಯ ಬಚ್ಚಲು ಮನೆಗೆ ಅವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ 10 ಅಡಿ ರಸ್ತೆ ಅಸ್ಥಿತ್ವದಲ್ಲಿ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ನಾನು ಹೇಳುವ ಸದರಿ 10 ಅಡಿ ರಸ್ತೆಯ ಬಗ್ಗೆ ಪಂಚಾಯಿತಿಯಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಅನುಸೂಚಿ ಎ ಆಸ್ತಿಯ ಪೂರ್ವಕ್ಕೆ 10 ಅಡಿ ಪ್ಯಾಸೇಜ್ ಇರುವ ಬಗ್ಗೆ ಯಾವುದೇ

ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಪೋಟೋಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಾನು ಹಾಜರುಪಡಿಸಿರುವ ಪೋಟೋಗಳನ್ನು ನಿಡಿ.1 ಮತ್ತು 2 ಎಂದು ಗುರುತಿಸಲಾಗಿದ್ದು, ಸದರಿ ಪೋಟೋಗಳಲ್ಲಿ ನಾನು ಹೇಳುವ 10 ಅಡಿ ರಸ್ತೆ ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅಲ್ಲಿ ಕಲ್ಲು ಮತ್ತು ಕುರಿಮರಿಗಳನ್ನು ಕಟ್ಟುತ್ತಿರುವ ಕಾರಣ, 10 ಅಡಿ ರಸ್ತೆ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಹೇಳುವಂತೆ 10 ಅಡಿ ರಸ್ತೆ ಯಾವತ್ತೂ ಅಸ್ಥಿತ್ವದಲ್ಲೇ ಇರಲಿಲ್ಲ, ನನ್ನ ಅನುಕೂಲಕ್ಕೆ ತಕ್ಕಂತೆ ನಾನು ಸುಳ್ಳು ದಾವಾ ಅನುಸೂಚಿ ಎ ಆಸ್ತಿಯ ಪೂರ್ವಕ್ಕೆ ಸುಳ್ಳು ಚಕ್ಕುಬಂದಿ ತೋರಿಸಿರುತ್ತೇನೆ ಮತ್ತು ಅನುಸೂಚಿ ಬಿ ಆಸ್ತಿ ಕೂಡ ಅಸ್ಥಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಅನುಸೂಚಿ ಎ ಆಸ್ತಿಯ ಚಕ್ಕುಬಂದಿಯು ಅಸ್ಥಿತ್ವದಲ್ಲಿ ಇದೆ ಎಂದು ತೋರಿಸಲು ನಾನು ಯಾವುದೇ ಪಂಚಾಯಿತಿ ದಾಖಲೆಯನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಅನುಸೂಚಿ ಬಿ ಆಸ್ತಿಯ ಚಕ್ಕುಬಂದಿಯ ಅಸ್ಥಿತ್ವವನ್ನು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ದಾವಾ ಅನುಸೂಚಿ ಎ ಮತ್ತು ಬಿ ಆಸ್ತಿಗಳ, ನಾವು ವಾದ ಪತ್ರದಲ್ಲಿ ತೋರಿಸಿರುವಂತೆ ಇರುವ ಚಕ್ಕುಬಂದಿಯನ್ನು ತೋರಿಸಲು ನಾನು ಯಾವುದೇ ಪಂಚಾಯಿತಿಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 2005 ರಲ್ಲಿ ಪಂಚಾಯಿತಿಯವರು ದಾವಾ ಅನುಸೂಚಿ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಡಿಮಾಂಡ್ ರಿಜಿಸ್ಟರ್ ನ್ನು ನಿಡೀರುವುದಿಲ್ಲ ಎಂದರೆ ಸರಿಯಲ್ಲ. ನಾವು ಮನೆ ಕಟ್ಟುವಾಗ ಸರ್ಕಾರದಿಂದ ಸಾಲ ಪಡೆದುಕೊಂಡಿರುತ್ತೇವೆ. ಅದೇ ರೀತಿ ಸರ್ಕಾರಕ್ಕೆ ಅಡಮಾನ ಮಾಡಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ನಾವು ಸರ್ಕಾರದಿಂದ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ ಮತ್ತು ಸದರಿ ಆಸ್ತಿಯ ಅಡಮಾನವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಿಭಾಗದಲ್ಲಿ ಬಿ ಷೆಡ್ಯೂಲ್ ಆಸ್ತಿ ನನ್ನ ತಂದೆಗೆ ಬಂದಿರುತ್ತದೆ ಎಂದು ಮತ್ತು ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳುವಂತೆ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ವಿಭಾಗ ಪತ್ರದಲ್ಲಿ ಓಡಾಡಲು 10 ಅಡಿ ರಸ್ತೆ ಬಿಟ್ಟ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಮತ್ತು ಹಾಗೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಪ್ರತಿವಾದಿ 10 ಅಡಿ ದಾರಿಯಲ್ಲಿ ಯಾವುದೇ ಬಚ್ಚಲು ಮನೆ ಕಟ್ಟಿರುವುದಿಲ್ಲ, ತನ್ನ ಜಾಗದಲ್ಲಿ ಪ್ರತಿವಾದಿ ಬಚ್ಚಲು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿ ಯಾವ ದಿನಾಂಕದಂದು ನಮಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು, ನಾವು 2017 ರಲ್ಲಿ ಈ ದಾವೆ ಹೂಡಿದ್ದು , ಆ ಸಂದರ್ಭದಲ್ಲಿ ಪ್ರತಿವಾದಿ ತೊಂದರೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಡಿ.ಅರ್.ನಂ46 ಮತ್ತು ಆಸ್ತಿ ನಂ.72/3 ರಲ್ಲಿ 22 X36 ಅಡಿಗಳು ಪ್ರತಿವಾದಿಯ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಪ್ರತಿವಾದಿಯ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ರಸೂಲ್ ಸಾಬಿ, ಪಶ್ಚಿಮಕ್ಕೆ ನನ್ನ ತಂದೆ ಸ್ದೀಕ್ ಸಾಬಿ ಅವರ ಮನೆ, ಉತ್ತರಕ್ಕೆ ಖಾಸಿಂ ಸಾಬಿ ಮತ್ತು ದಕ್ಷಿಣಕ್ಕೆ ಸುಕೂರ್ ಸಾಬಿ ಅವರ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು, ಅದಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಗೆ ಪ್ರತಿವಾದಿಗೆ ಪಂಚಾಯಿತಿಯಿಂದ ಡಿಮಾಂಡ್ ರಿಜಿಸ್ಟರ್ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಗೆ ಕೊಟ್ಟ ಡಿಮಾಂಡ್ ರಿಜಿಸ್ಟರ್ ನಲ್ಲಿ ರಸ್ತೆಯ ಬಗ್ಗೆ ಯಾವುದೇ ಉಲ್ಲೇಖ ಇರವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರದ್ದರಲ್ಲೂ ಇಲ್ಲ, ನಮ್ಮದ್ದರಲ್ಲೂ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ 10 ಅಡಿಗಳ ರಸ್ತೆ ಅಸ್ಥಿತ್ವದಲ್ಲಿ ಇಲ್ಲದಿದ್ದರೂ ಸಹಾ ನಮ್ಮ ಮತ್ತು ಪ್ರತಿವಾದಿಯ ನಡವೆ ಯಾವುದೇ ಮಾತುಕತೆ ಇರದ ಕಾರಣ, ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.